

ಕಾರ್ತಿಕ್ ಆರ್ಯನ್ ಕೂಡ ಒಂದಿಷ್ಟು ದಿನ ಗಡ್ಡ ಬೆಳೆಸಿದರು. ಇನ್ನು ಮುಖವೇ ಕಾಣದಂತಾದೀತು ಎನ್ನುವ ಆತಂಕದಲ್ಲಿ ಕ್ಲೀನ್ ಶೇವ್ ಮಾಡಿಕೊಂಡು, 'ಅಬ್ಬಾ... ಮೊದಲಿನಂತಾದೆ' ಎಂದು ನಕ್ಕರು. ಅಷ್ಟೇ ಅಲ್ಲ, ಅದನ್ನು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಕೂಡ ಮಾಡಿದರು. ಅದಕ್ಕೂ ಮೊದಲು ತಾನು 'ಸೆಕ್ಸಿಯೋ, ಜಂಗ್ಲಿಯೋ' ಎಂದು ಸಾಮಾಜಿಕ ಜಾಲತಾಣದಲ್ಲಿ ಅವರೊಂದು ಸಮೀಕ್ಷೆಯನ್ನೂ ನಡೆಸಿದರು. ಹೆಚ್ಚು ಜನ ಏನೆಂದರು ಎನ್ನುವುದು ಮಾತ್ರ ಗುಟ್ಟು. ಶೇವ್ ಮಾಡಿಕೊಂಡಿದ್ದನ್ನು ನೋಡಿದರೆ 'ಜಂಗ್ಲಿ' ಎಂದೇ ಹೇಳಿರಬೇಕೋ ಏನೋ.

ತಲೆಕೂದಲು ಮೊದಲಿನಷ್ಟು ಇಲ್ಲದೇ ಇದ್ದರೂ ಮಾಗಿದ ನಟ ಅರ್ಜುನ್ ರಾಂಪಾಲ್ ತಮ್ಮ ಸಂಗಾತಿ ಗೇಬ್ರಿಯೆಲಾ ಡೆಮೆಟ್ರಿಯೇಡ್ಸ್ ಹೇಳಿದರೆಂದು ಸೊಂಪಾದ ಗಡ್ಡ ಬಿಟ್ಟರು. ಕೆಲವೇ ದಿನಗಳಲ್ಲಿ ತಮಗೇ ತಾವೇ ರೋಗಿಯಂತೆ ಕಾಣಿಸತೊಡಗಿದರು. ಮೂರ್ನಾಲ್ಕು ದಿನ ಕನ್ನಡಿಯನ್ನೇ ನೋಡಲಿಲ್ಲ. ಆಮೇಲೆ ಸಂಗಾತಿಯ ಸಹಾಯದಿಂದಲೇ ಅದನ್ನು ಟ್ರಿಮ್ ಮಾಡಿಕೊಂಡು ಅವರೂ ವಿಡಿಯೊ ಹರಿಯಬಿಟ್ಟರು. ಅವರ ಹೇರ್‌ಸ್ಟೈಲಿಸ್ಟ್ ಆಲಿಂ ಹಕೀಂ, 'ಇದೇನು ಸರ್ ನಿಮ್ಮ ಕಥೆ' ಎಂದು ಫೋನ್ ಮಾಡಿ ವಿಚಾರಿಸಿಕೊಂಡರು.

'ಸಿನಿಮಾ ಶುರುವಾಗುವಷ್ಟರಲ್ಲಿ ಗಡ್ಡ ಮತ್ತೆ ಬೆಳೆಯುತ್ತದೇನೋ ನೋಡೋಣ. ಸದ್ಯಕ್ಕಂತೂ ನಾನು ಮತ್ತೆ ನಾಗರಿಕನಾದೆ' ಎಂದು ಅರ್ಜುನ್ ಕುರುಚಲು ಗಡ್ಡವನ್ನೇ ನೀವಿಕೊಂಡದ್ದು ಕೂಡ ಸುದ್ದಿಗೆ ವಸ್ತುವೇ.

'ಮೇಡ್ ಇನ್ ಇಂಡಿಯಾ' ಮಾಡೆಲ್ ಮಿಲಿಂದ್ ಬಿಳಿ ಗಡ್ಡಕ್ಕೂ ವರ್ಚಸ್ಸಿದೆ. ಅವರು ಇನ್‌ಸ್ಟಾಗ್ರಾಂನಲ್ಲಿ ಚೆನ್ನಾಗಿ ಟ್ರಿಮ್ ಮಾಡಿಕೊಂಡೇ ಫೋಟೊ ಹಾಕಿದರು. 'ಕೊರೊನಾ ಹೋದಮೇಲೆ ನಾವೆಲ್ಲ ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಳ್ಳಬೇಕಾ? ಮುಂದೆ ಯಾವ ಬಿಸಿನೆಸ್ಸು ಬೆಳೆಯುತ್ತದೆ? ರೈತನಾಗಿಬಿಡುವುದೇ ವಾಸಿಯಾ? ಮನೆಯಲ್ಲಿ ಕೂತು ಕೂತು ನಮ್ಮೆಲ್ಲರ ರೋಗ ನಿರೋಧಕ ಶಕ್ತಿ ಢಮಾರ್ ಆದೀತೆ?' ಹೀಗೆ ಲೋಕದ ಚಿಂತೆಯ ಪ್ರಶ್ನೆಗಳನ್ನು ಎಸೆಯುತ್ತಾ ಕೊನೆಗೆ, 'ಗಡ್ಡ ಇರಬೇಕೋ, ಬೇಡವೋ ಮಾರಾಯ್ರೆ' ಅಂತ ಅಭಿಮಾನಿ ದೇವರುಗಳಿಗೆ ಚೆಂದದ ಪ್ರಶ್ನೆ ಹಾಕಿ ನಕ್ಕಿದ್ದರು. ರಣವೀರ್ ಸಿಂಗ್ ರಾಕ್ಷಸೀ ಸ್ವರೂಪದ ಗಡ್ಡ ಬಿಟ್ಟು ಕುಹಕ ನಗೆ ನಕ್ಕು ಪೋಸ್ ಕೊಟ್ಟಿದ್ದಕ್ಕೆ ನಿರುತ್ತರರಾದ ನಟ–ನಟಿಯರೆಷ್ಟೋ. ವಿಕಿ ಕೌಶಲ್ ಕೂಡ ಗಡ್ಡವನ್ನು ಚೆಂದವಾಗಿ ಟ್ರಿಮ್ ಮಾಡಿಕೊಂಡು 'ಹೆಂಗೆ' ಎಂದಿದ್ದು ನಮ್ಮ ಕನ್ನಡದ ರಮೇಶ್ ಅರವಿಂದ್ ಅವರಿಗೂ ಸ್ಫೂರ್ತಿ ಕೊಟ್ಟಿರಬೇಕು. ಅವರು 'ಶಿವಾಜಿ ಸುರತ್ಕಲ್' ಸಿನಿಮಾ ಕಾಲದ ಗಡ್ಡದ ಗೆಟಪ್ ಅನ್ನು ಲಾಕ್‌ಡೌನ್ ಕಾಲದಲ್ಲೂ ಕಾಪಾಡಿಕೊಂಡೇ ಇದ್ದರಲ್ಲ.

ಹೀಗೆ ಲಾಕ್‌ಡೌನ್ ಸಂದರ್ಭದಲ್ಲಿ ತಲೆಗೂದಲು ಹಾಗೂ ಗಡ್ಡ ಸೊಂಪಾಗಿಯೋ, ಪೊಗದಸ್ತಾಗಿಯೋ, ಅಡ್ಡಾದಿಡ್ಡಿಯಾಗಿಯೋ ಬೆಳೆಯುತ್ತಾ ಹೋದಂತೆ ಯುವಕರ 'ಪ್ರಯೋಗಿ ಮನಸ್ಸೂ' ಜಾಗೃತಗೊಂಡಿತು. ಸಲೂನ್ ಶುರುವಾದ ಮೇಲೆ ಗಡ್ಡದಲ್ಲೇ ಹಲವು ಶೇಪ್‌ಗಳನ್ನು ಮಾಡಿಸಿಕೊಂಡು 'ಹೇಗೆ ಕಂಡೇನೋ' ಎಂದು ಕನ್ನಡಿಯನ್ನು ಮಾತನಾಡಿಸಲು ಶುರುವಿಟ್ಟರು. ವಿರಾಟ್ ಕೊಹ್ಲಿ ಹಚ್ಚುವ ಬಿಯರ್ಡ್ ಕ್ರೀಮ್ ಯಾವುದೆಂದು ಸಂಶೋಧನೆಗೆ ಶುರುವಿಟ್ಟುಕೊಂಡರು. ಯಶ್ ಹೇಳಿದಂತೆ ಶೀರ್ಷಾಸನ ಹಾಕಿದವರೂ ಇದ್ದಾರೆ. ಭೂಮಿಯ ಗುರುತ್ವಾಕರ್ಷಣೆಯಿಂದಾಗಿ ದಿನಕ್ಕೆ ಇಪ್ಪತ್ತು ನಿಮಿಷ ಶೀರ್ಷಾಸನ ಹಾಕಿದರೆ ಗಡ್ಡ ಸೊಂಪಾಗಿ ಬೆಳೆಯುತ್ತದೆ ಎಂಬ 'ಇನೋವೇಷನ್'ನಿಂದ ಎರಡು ಲಾಭಗಳಿವೆ: ಒಂದು–ಗಡ್ಡ ಬೆಳೆದರೂ ಬೆಳೆಯಬಹುದು. ಇನ್ನೊಂದು–ದೇಹಕ್ಕಂತೂ ಚೆನ್ನಾಗಿ ವ್ಯಾಯಾಮ ಆಗುತ್ತದೆ.



ಗಡ್ಡ ಜ್ಞಾನದ ಸಂಕೇತ; ರಬೀಂದ್ರನಾಥ ಟ್ಯಾಗೋರರನ್ನು ನೋಡಿ. ಸಾಕ್ರೆಟಸ್‌ನನ್ನೋ, ಅರಿಸ್ಟಾಟಲನ್ನೋ ಕಾಣಿ. ಗಡ್ಡ ಸೃಜನಶೀಲತೆಯ ಸಂಕೇತ; ಯೇಸುದಾಸ್ ಋಷಿಸದೃಶ ಗಡ್ಡದಲ್ಲೇ 'ಸುರುಮೈ ಅಖಿಯೋ ಮೇ...' ಲಾಲಿ ಹಾಡುವುದನ್ನು ಕಣ್ಮುಚ್ಚಿ ಧ್ಯಾನಿಸಿ. ಎಂ.ಎಫ್. ಹುಸೇನರ ಗೆರೆಗಳ ಕಡೆಗೆ ಕಣ್ಣಾಡಿಸಿ. ಮಲಯಾಳಿ ನಿರ್ದೇಶಕ ಲಿಜೊ ಜೋಸ್ ಪೆಲಿಸರಿಯ ಟ್ರಿಮ್ ಮಾಡದ ಗಡ್ಡದಾಳದಲ್ಲಿ ಅದೆಷ್ಟು ಸಿನಿಮಾ ದೃಶ್ಯಗಳು ಅವಿತಿವೆಯೋ...ಹುಡುಕಿ.

'ಗಡ್ಡ ಎಳೆದವನ ಬಾಯಿಗೆ ಮಿಠಾಯಿ' ಎಂಬ ಕಥೆಯನ್ನು ಈಗ ಲೆಕ್ಕವಿಲ್ಲದಷ್ಟು ಮಕ್ಕಳು ಕೇಳಿ ನಲಿದಿರಬೇಕು. ಗಡ್ಡ ಎನ್ನುವುದು ಲೈಂಗಿಕ ಸಿದ್ಧತೆಯ ಸಂಕೇತ ಎಂದವರು ತುಂಟ ನೋಟ ಬೀರಿರಲಿಕ್ಕೂ ಸಾಕು. 'ಅದಕ್ಯಾಕೆ ಅಷ್ಟು ಬೀಗುವಿರಿ... ಡಿಹೈಡ್ರೋಟೆಸ್ಟೋಸ್ಟೆರಾನ್ ಉಕ್ಕಿದರೆ ಗಡ್ಡ ತಂತಾನೇ ಬೆಳೆಯುತ್ತದಷ್ಟೆ' ಎಂದು ಹೇಳುವ ವೈದ್ಯರನ್ನು ಗಡ್ಡಪ್ರೇಮಿ ಹೈಕಳು ತಾತ್ಸಾರದಿಂದ ನೋಡುವ ಸಾಧ್ಯತೆ ಇದೆ. ಚಾರ್ಲ್ಸ್ ಡಾರ್ವಿನ್ ಮಂಡಿಸಿದ ವಿಕಾಸವಾದದಲ್ಲೂ 'ಗಡ್ಡೋಪಾಖ್ಯಾನ'ವಿದೆಯಲ್ಲ. ಗಡ್ಡ ಬಹುಧರ್ಮೀಯ, ಬಹುದೇಶೀಯ. ಚೆಗುವೆರಾ ಬಿಟ್ಟ ಗಡ್ಡ ಅದೆಷ್ಟೋ ಯುವಕರಿಗೆ ಸ್ಫೂರ್ತಿಯಾಗಿತ್ತು. ರೋಮನ್ ಕ್ಯಾಥೊಲಿಕ್ ಮಂದಿಗೆ ಸೊಲಾನಸ್ ಕ್ಯಾಸೆಯ ಗಲ್ಲದ ಮೇಲಿನ ಪೊದೆಯಂಥ ಗಡ್ಡದ ಕುರಿತು ಈಗಲೂ ಹೆಮ್ಮೆ. ಇನ್ನು ಋಷಿವರ್ಯರ ಗಡ್ಡ ಮೀಮಾಂಸೆಗೆ ಇಳಿದರೆ ಬಣ್ಣನೆಗೆ ಪುಟಗಳೇ ಬೇಕಾದಾವು. ಅಮೆರಿಕದ ಬಾಸ್ಕೆಟ್‌ಬಾಲ್ ಆಟಗಾರ ಜೇಮ್ಸ್ ಹಾರ್ಡೆನ್ ಜೂನಿಯರ್‌ಗೆ ಗಡ್ಡ ಬಿಟ್ಟಿದ್ದ ಕಾರಣಕ್ಕೇ 'ಬಿಯರ್ಡ್' ಎಂಬ ಅಡ್ಡಹೆಸರೇ ಬಂದಿದ್ದನ್ನು ಮರೆಯಲಾಗದು. ನ್ಯೂಜಿಲೆಂಡ್ ಕ್ರಿಕೆಟ್ ತಂಡದ ತಣ್ಣಗಿನ ಬ್ಯಾಟ್ಸ್‌ಮನ್ ಕೇನ್ ವಿಲಿಯಮ್ಸನ್ ಗಡ್ಡದ ಮೇಲೆ ಬೌಲರ್ ನಿಗಾ ಹರಿದು, ಅವರ ಕಣ್ಣೊಳಗಿನ ಲೆಕ್ಕಾಚಾರವನ್ನು ಮರೆ ಮಾಡುವ ವಿಚಾರ ಅದೆಷ್ಟು ಜನರಿಗೆ ಗೊತ್ತಿಲ್ಲ.

ಹೀಗೆ... ದುರಿತ ಕಾಲದಲ್ಲೂ 'ಗಡ್ಡೋಪಾಖ್ಯಾನ'ಕ್ಕೆ ಇಳಿಯಲು ಯುವಶಕ್ತಿಗೆ ಕಾರಣಗಳು ದಂಡಿಯಾಗಿವೆ; ಅವರವರ ಭಾವಕ್ಕೆ, ಭಕುತಿಗೆ.

ಇಷ್ಟಾದ ಮೇಲೆ ನಟ ಯಶ್ ಮಗಳು ಅವರ ಪೊಗದಸ್ತಾದ ಗಡ್ಡವನ್ನು ಎಳೆದಳೆಂದೂ, ಅವಳ ಬಾಯಿಗೆ ಮಿಠಾಯಿ ಬಿದ್ದಿತೆನ್ನುವುದನ್ನೂ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.